ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 42-51
©*IIMRD*, Mysuru
IIMRD JOURNALS
www.iimrd.com

# ಕೊಪ್ಪಳ ಜಿಲ್ಲೆಯ ನರೇಗಾ ಫಲಾನುಭವಿಗಳ ಮೇಲಿನ ಲಾಠಿಚಾರ್ಜ್ ಪ್ರಕರಣ: ಮಹಿಳಾ ಹೋರಾಟದ ದಮನದ ತಂತ್ರವೇ?

**ಡಾ. ಭೀಮೇಶ ಮಾಚನೂರು***
* ಪೋಸ್ಟ್ ಡಾಕ್ಟೋರಲ್ ಫೆಲೋ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***ಸಾರಾಂಶ* (Abstract)**

*ಕೊಪ್ಪಳ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಬೂದಗುಂಪಾ, ಇಂದರಗಿ, ಇರಕಲ್‌ಗಡಾ, ಹಾಸಗಲ್ ಮತ್ತು ಹಿರೇಬಗನಾಳ್ ಗ್ರಾಮ ಪಂಚಾಯಿತಿಗಳು ಎಂಜಿಎನ್‌ಆರ್‌ಇಜಿ (ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ–ನರೇಗಾ) ಯೋಜನೆಗೆ ಸಂಬಂಧಿಸಿದಂತೆ ರಾಜ್ಯಾದ್ಯಂತ ಪ್ರಖ್ಯಾತಿಯನ್ನು ಪಡೆಯಿತು. ಅಂದರೆ ಇಲ್ಲಿ ಉದ್ಯೋಗ ಖಾತರಿ ಯೋಜನೆಯ ಸರಿಯಾದ ಅನುಷ್ಠಾನಕ್ಕಾಗಿಯಲ್ಲದೆ, ಈ ಯೋಜನೆಯಲ್ಲಿ ಆದಂತಹ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಮತ್ತು ಯೋಜನೆಯ ಫಲಾನುಭವಿಗಳ ಮೇಲೆ ನಡೆದ ಲಾಠೀ ಚಾರ್ಜ್‌ನ ಕಾರಣಕ್ಕಾಗಿ ರಾಜ್ಯವ್ಯಾಪಿ ಹೆಸರನ್ನು ಪಡೆದುಕೊಂಡಿತು. ಪ್ರಸ್ತುತ ಲೇಖನದಲ್ಲಿ ಈ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಉದ್ಯೋಗ ಖಾತರಿ ಯೋಜನೆಯ ವಾಸ್ತವ ಸ್ಥಿತಿಗತಿ ಮತ್ತು ಈ ಯೋಜನೆಯ ಫಲಾನುಭವಿಗಳ ಮೇಲಾದ ಲಾಠಿಚಾರ್ಜ್‌ಗೆ ಕಾರಣ ಮತ್ತು ಅದರ ಪರಿಣಾಮಗಳನ್ನು ಸಾಮಾಜಿಕ ಸಂಶೋಧನಾ ವಿಧಾನಗಳನ್ನು ಬಳಸಿ ಕ್ಷೇತ್ರಕಾರ್ಯವನ್ನು ಕೈಗೊಂಡು ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.*

***ಮುಖ್ಯ ಪದಗಳು* (Keywords):** ಕೊಪ್ಪಳ, ಎಂಎನ್‌ಆರ್‌ಇಜಿ, ನರೇಗಾ, ಗ್ರಾಮ ಪಂಚಾಯತಿ, ಮಹಿಳಾ ಕಾರ್ಮಿಕರು, ಲಾಠಿಚಾರ್ಜ್.

## ಪೀಠಿಕೆ

ಭಾರತದಲ್ಲಿ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯು ಜಾರಿಗೆ ಬಂದು ಸುಮಾರು 13 ವರ್ಷಗಳು ಕಳೆದಿವೆ. ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯು ಕೂಲಿಕಾರ್ಮಿಕರಿಗೆ, ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ತುಂಬಾ ಅನುಕೂಲಗಳನ್ನು ಒದಗಿಸಿಕೊಟ್ಟಿದೆ. ಈ ಯೋಜನೆಯು ಕುಶಲವಲ್ಲದ ಅಕುಶಲ ಕೆಲಸವನ್ನು ಬಯಸಿ ಬರುವಂತ ಪ್ರತಿಯೊಂದು ಕುಟುಂಬಕ್ಕೆ ನೂರು ದಿನಗಳ ಕೆಲಸ ನೀಡುತ್ತದೆ. ಹಾಗೆಯೇ ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನಿನಲ್ಲಿ ಕೃಷಿ ಹೊಂಡಗಳ ನಿರ್ಮಾಣ, ಗಿಡ ನೆಡುವುದು, ಚೆಕ್‌ಡ್ಯಾಮ್, ಬದು ನಿರ್ಮಾಣ, ಭೂಮಿ ಸಮತಟ್ಟು ಮಾಡುವುದು ಇನ್ನು ಮುಂತಾದ ಕೆಲಸಗಳನ್ನು ಮಾಡಿಸಲು ಅವಕಾಶವನ್ನು ಒದಗಿಸಿಕೊಟ್ಟಿದೆ. ಈ ಕಾರಣಗಳಿಗಾಗಿ ಯೋಜನೆಯು ಏಕ ಕಾಲದಲ್ಲಿ ಬಡ

*Please cite this article as: ಭೀಮೇಶ ಮಾಚನೂರು. (2021).* ಕೊಪ್ಪಳ ಜಿಲ್ಲೆಯ ನರೇಗಾ ಫಲಾನುಭವಿಗಳ ಮೇಲಿನ ಲಾಠಿಚಾರ್ಜ್ ಪ್ರಕರಣ: ಮಹಿಳಾ ಹೋರಾಟದ ದಮನದ ತಂತ್ರವೇ?. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 42–51*

ಕೂಲಿಕಾರರಿಗೂ ಮತ್ತು ಸಣ್ಣ, ಅತೀ ಸಣ್ಣ ರೈತರಿಗೂ ಒಂದು ವರದಾನವಾಗಿ ಪರಿಣಮಿಸಿದೆ. ಯೋಜನೆಯ ಮುಖ್ಯ ಉದ್ದೇಶ ಗ್ರಾಮೀಣ ಭಾಗದ ಜನರು ಉದ್ಯೋಗವನ್ನರಸಿ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವುದರ ಸಲುವಾಗಿ ಮತ್ತು ಸಮಾಜದಲ್ಲಿನ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಜಾರಿಯಾದ ಈ ಯೋಜನೆ ಅದರ ಗುರಿ ಮುಟ್ಟಿದೆಯೇ ಎಂಬುದನ್ನು ಅವಲೋಕಿಸಿದರೆ, ಫಲಿತಾಂಶ ಮಾತ್ರ ಸಮಾಧಾನಕರವಾಗಿಲ್ಲದಿರುವುದು ಕಂಡುಬರುತ್ತದೆ. ಏಕೆಂದರೆ ಗ್ರಾಮೀಣ ಭಾಗದ ಸ್ಥಳೀಯ ರಾಜಕೀಯ ವ್ಯಕ್ತಿಗಳ ರಾಜಕಾರಣಕ್ಕೆ ಸಿಲುಕಿ ಈ ಯೋಜನೆಯ ಆಶಯ ಈಡೇರದಿರುವುದು ಅತ್ಯಂತ ಶೋಚನೀಯ ಸಂಗತಿಯಾಗಿದೆ.

**ಘಟನೆಯ ಹಿನ್ನೆಲೆ**

ಬೂದಗುಂಪಾ, ಇಂದರಗಿ, ಇಲಕಲ್‌ಗಡಾ, ಹಾಸಗಲ್ ಮತ್ತು ಹಿರೇಬಗನಾಳ್ ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿನ ಬಡ ಕೂಲಿಕಾರರು, ಸಣ್ಣ ಮತ್ತು ಅತೀ ಸಣ್ಣ ರೈತರು ಉದ್ಯೋಗ ಖಾತರಿ ಯೋಜನೆಯಲ್ಲಿ ತಮಗೆ ಕೆಲಸ ಕೊಡುವಂತೆ ಗ್ರಾಮ ಪಂಚಾಯತಿಯ ಮೇಲೆ ಒತ್ತಡವನ್ನು ಹಾಕಿದ್ದಾರೆ. ಪರಿಣಾಮವಾಗಿ ಗ್ರಾಮ ಪಂಚಾಯತಿಯ ಅಧಿಕಾರಿಗಳು ಮತ್ತು ಚುನಾಯಿತ ಸದಸ್ಯರು ಉದ್ಯೋಗ ಖಾತರಿಯನ್ನು ಅನುಷ್ಠಾನಗೊಳಿಸಿ ಇವರನ್ನು ಕೆಲಸಕ್ಕೆ ಆಹ್ವಾನಿಸಿದ್ದಾರೆ. ಪ್ರತಿಯೊಂದು ಕುಟುಂಬದಿಂದ ಕನಿಷ್ಠ ಇಬ್ಬರು ಮೂರು ಜನರಂತೆ ನಿರಂತರವಾಗಿ ನಲವತ್ತರಿಂದ ನಲವತ್ತೈದು ದಿನಗಳ ಕಾಲ ಕೆಲಸವನ್ನು ಮಾಡಿದ್ದಾರೆ. ಒಂದು ಆರ್ಥಿಕ ವರ್ಷದಲ್ಲಿ ಪಂಚಾಯತಿಯವರು ನೀಡಬೇಕಾದ ನೂರು ದಿನಗಳ ಕೆಲಸವನ್ನು ಪೂರೈಸಿದ್ದಾರೆ. ಯೋಜನೆಯ ನಿಯಮದ ಪ್ರಕಾರ ಕೆಲಸ ಮಾಡಿದ ಹದಿನೈದು ದಿನಗಳ ಒಳಗಾಗಿ ಕೂಲಿ ಪಾವತಿಸಬೇಕು. ಆದರೆ ಕೆಲಸ ಮುಗಿಸಿ ಒಂದು ತಿಂಗಳ ಮೇಲಾದರೂ ಗ್ರಾಮ ಪಂಚಾಯತಿಯ ಅಧಿಕಾರಿಗಳು ಕೆಲಸ ಮಾಡಿದ ಕೂಲಿಕಾರರಿಗೆ ಕೂಲಿ ಪಾವತಿಸಿಲ್ಲ. ಇದರಿಂದ ಸಿಟ್ಟಿಗೆದ್ದ ಮಹಿಳಾ ಕೂಲಿಕಾರ್ಮಿಕರು ಗ್ರಾಮ ಪಂಚಾಯತಿಗಳಿಗೆ ಮುತ್ತಿಗೆ ಹಾಕಿದ್ದಾರೆ. ಇದರಿಂದ ಯಾವುದೇ ಪ್ರಯೋಜನವಾಗದ ಕಾರಣ, ತಾಲೂಕು ಪಂಚಾಯತಿಗೆ ತೆರಳಿ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗೆ ಘೇರಾವ್ ಹಾಕಿ ತರಾಟೆಗೆ ತೆಗೆದುಕೊಂಡಿದ್ದಾರೆ. ಆಗ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಹೊರಹೋಗಲು ಯತ್ನಿಸಿದ್ದಾರೆ. ಆದರೆ ಮಹಿಳಾ ಕೂಲಿ ಕಾರ್ಮಿಕರು ಅವರನ್ನು ಹೊರ ಹೋಗಲು ಬಿಡದೆ ತಡೆದಿದ್ದಾರೆ. ಪರಿಸ್ಥಿತಿ ಕೈ ಮೀರುವುದನ್ನು ಅರ್ಥಮಾಡಿಕೊಂಡ ಕಾರ್ಯನಿವಾರ್ಹಕ ಅಧಿಕಾರಿ ಅವರು 'ಪ್ರಕರಣವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ' ಎಂದು ಹೇಳಿದ ಮೇಲೆ ಘೇರಾವ್ ಹಿಂಪಡೆದಿದ್ದಾರೆ. ಆದರೆ ಇದಾವುದೂ ಫಲಕಾರಿಯಾಗಲಿಲ್ಲ. ಈ ಮೊದಲೇ ಮನವಿ ಪತ್ರದಲ್ಲಿ ತಿಳಿಸಿದಂತೆ ದಿನಾಂಕ ಮಾರ್ಚ್ 22, 2011ರಂದು ಈ ಐದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವಂತ ಪ್ರತಿಯೊಂದು ಗ್ರಾಮದ ಕೂಲಿಕಾರ್ಮಿಕ ಮಹಿಳೆಯರು ಮತ್ತು ಪುರುಷರು ಸುಮಾರು 500 ರಿಂದ 600 ಜನ ಸೇರಿ ಕೊಪ್ಪಳ ತಾಲೂಕು ಪಂಚಾಯತಿಯ ಎದುರು ಧರಣಿಗೆ ಕುಳಿತುಕೊಂಡಿದ್ದಾರೆ. ಇದು ಅನಿರ್ಧಿಷ್ಠಾವಧಿವರೆಗೆ ಮುಂದುವರೆಯಿತು. ಮುಂದೆ ಈ ಧರಣಿ ಬೇರೆಯದೇ ಸ್ವರೂಪವನ್ನು ಪಡೆಯಿತು.

ಕೂಲಿ ಕಾರ್ಮಿಕರಿಂದ ಪ್ರಾರಂಭವಾದ ಈ ಧರಣಿ ಮೊದಲ ದಿನ ಶಾಂತವಾಗಿ ನಡೆದಿದೆ. ಈ ಧರಣಿಯಲ್ಲಿ ಹೆಚ್ಚಾಗಿ ಮಹಿಳಾ ಕೂಲಿ ಕಾರ್ಮಿಕರು ಭಾಗವಹಿಸಿದ್ದರು. ಅದರಲ್ಲೂ ವಿಶೇಷವಾಗಿ ಚಿಕ್ಕ ಮಕ್ಕಳ ತಾಯಂದಿರು, ವಿಧವಾ ಮಹಿಳೆಯರು ಮತ್ತು ವಯಸ್ಸಾದ ಮಹಿಳೆಯರಿದ್ದರು. ಧರಣಿಯು ಎರಡನೇ ದಿನಕ್ಕೆ ಮುಂದುವರೆದು, ಮೂರನೆಯ ದಿನಕ್ಕೆ ಕಾಲಿಟ್ಟಿದೆ. ಆ ದಿನವೂ ಯಾವೊಬ್ಬ ಅಧಿಕಾರಿಯು ಬಂದು ಮಾತನಾಡದ ಕಾರಣ ಇದರಿಂದ ಕೋಪೋದ್ರಿಕ್ತಗೊಂಡ ಎಲ್ಲಾ ಕಾರ್ಮಿಕರು ಮನವಿ ಪತ್ರದಲ್ಲಿ ತಿಳಿಸಿರುವಂತೆ ನಾಲ್ಕನೆಯ ದಿನ ತಾಲೂಕು ಪಂಚಾಯತಿಗೆ ಬೀಗ ಮುದ್ರೆಯನ್ನು ಹಾಕಲು ಮುಂದಾಗಿದ್ದಾರೆ. ಆಗ ದಿಢೀರನೆ ಆಗಮಿಸಿದ ಪೊಲೀಸ್ ಅಧಿಕಾರಿಗಳು ಇದ್ದಕ್ಕಿದ್ದಂತೆ ಇವರ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ. ಮಹಿಳೆಯರು, ವಯಸ್ಸಾದ ವೃದ್ಧರು, ಚಿಕ್ಕ ಮಕ್ಕಳ ತಾಯಂದಿರು ಎನ್ನದೆ ಪ್ರತಿಯೊಬ್ಬ ಕೂಲಿ ಕಾರ್ಮಿಕರನ್ನು ಮನಬಂದಂತೆ ಲಾಠಿಯಿಂದ ಥಳಿಸಿದ್ದಾರೆ. ಪೆಂಡಾಲಿಗೆ ಹಾಕಿದ ಕಟ್ಟಿಗೆಯಿಂದ ಹೊಡೆದಿದ್ದಾರೆ. ಬೂಟುಗಾಲಿನಿಂದ ಒದ್ದಿದ್ದಾರೆ. ಹಾಗೆಯೇ ಮಹಿಳೆಯರೆಂದು ಲೆಕ್ಕಿಸದೆ ಮಹಿಳೆಯರ ಮೈಮೇಲಿನ ಬಟ್ಟೆಗಳನ್ನು ಹಿಡಿದು ಎಳೆದಾಡಿ ಓಡಾಡಿಸಿ ಹೊಡೆದಿದ್ದಾರೆ. ಈ ಘಟನೆಯಲ್ಲಿ ಕೆಲವರಿಗೆ ಕೈ ಕಾಲು ಮುರಿದರೆ, ಕೆಲವು ಮಹಿಳೆಯರು ತಮ್ಮ ಗರ್ಭಕೋಶವನ್ನೇ ಕಳೆದುಕೊಂಡಿದ್ದಾರೆ. ಕಣ್ಣು ಕಳೆದುಕೊಂಡಿದ್ದಾರೆ. ಆದರೆ ಈ ಭಾಗದಲ್ಲಿನ ಗ್ರಾಮ ಪಂಚಾಯಿತಿಗಳು ಈ ಎಲ್ಲಾ ಅವಕಾಶಗಳನ್ನು ರೈತರಿಗಾಗಲಿ ಅಥವಾ ಬಡ ಕೂಲಿಕಾರರಿಗಾಗಲೀ ಅವಕಾಶಗಳನ್ನು ಒದಗಿಸಿಕೊಟ್ಟಿಲ್ಲದಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ಈ ಪ್ರಕರಣದಲ್ಲಿ ಲಾಟಿ ಚಾರ್ಜ್‌ಗೆ ಒಳಗಾದವರಲ್ಲಿ ಮಹಿಳೆಯರೇ ಹೆಚ್ಚಾಗಿದ್ದರು. ಹಾಗಾಗಿ ಇದರಿಂದ ಮಹಿಳೆಯರ ಮೇಲೆಯೇ ಹೆಚ್ಚಿನ ಪರಿಣಾಮ ಬೀರಿತು. ಈ ಕಾರಣಕ್ಕಾಗಿ ಹೆಣ್ಣುಮಕ್ಕಳ ಭಾಗವಹಿಸುವಿಕೆ ಮತ್ತು ಅವರು ಅನುಭವಿಸಿದ ನೋವು ಉದ್ಯೋಗ ಖಾತ್ರಿ ಯೋಜನೆಯಲ್ಲಿನ ಲಿಂಗದ ನೆಲೆಯಲ್ಲಿ ನಡೆಯುವ ಶೋಷಣೆಯನ್ನು ತೋರಿಸುವಂತಿದೆ. ಒಟ್ಟಾರೆಯಾಗಿ ಲಾಠಿಚಾರ್ಜ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಘಟನೆಗಳ ಸದಸ್ಯರನ್ನು ಮತ್ತು ಮಹಿಳಾ ಮತ್ತು ಪುರುಷ ಕೂಲಿಕಾರರನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ನರೇಗಾ ಯೋಜನೆಯ ಅನುಷ್ಠಾನದ ಅವ್ಯವಸ್ಥೆಯನ್ನು ಬಿಂಬಿಸುವ ಮತ್ತು ಸರಕಾರದ ದಬ್ಬಾಳಿಕೆಯನ್ನು ತೋರಿಸುವ ಮಾದರಿಯನ್ನು ಲಾಠಿಚಾರ್ಜ್ ಪ್ರಕರಣ ಬಿಂಬಿಸುತ್ತಿದೆ. ಈ ಪ್ರಕರಣವನ್ನು ಕುರಿತ ಈ ಭಾಗದ ರೈತ ಕೂಲಿ ಕಾರ್ಮಿಕರ ನಿರೂಪಣೆಗಳು ಇದರ ಮತ್ತೊಂದು ಮಗ್ಗುಲನ್ನು ತೆರೆಯುತ್ತವೆ

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಇರಕಲ್‌ಗಡದ ಅನ್ನಪೂರ್ಣಮ್ಮರವರು ಹೇಳುವಂತೆ "ಯೋಜನೆದಾಗ ಒಂದ್ವರೆ ತಿಂಗಳ ಕೆಲ್ಸಾ ಮಾಡೀವಿ. ದುಡಿದ ಕೂಲಿ ಕೇಳಾಕ ಹೋದ್ರ ಪಂಚಾಯ್ತಿ ಅಧ್ಯಕ್ಷರಾಗಲಿ, ಸದಸ್ಯರಾಗಲಿ ಮತ್ಯಾ ಸೆಕ್ರೆಟರಿ ಆಗಲಿ ಯಾರು ಗಮನಕ್ಕ ತಗಲಿಲ್ಲ. ಮತ್ಯಾ ಯಾರು ಮೈಮ್ಯಾಲೆ ಹಾಕ್ಕ್ಯಾಲಿಲ್ಲ. ಎಲ್ಲಾರು ಜಾರಿಕೆಂಡು ಜಾರಿಕೆಂಡು ಹೋಗಾಕತ್ತಿದ್ರು. ಜಾಸ್ತಿ ಬಿಗುವು ಮಾಡಿ ಕೇಳಿದಾಗ ಸರಕಾರದಿಂದ ರೊಕ್ಕ ಬಂದಿಲ್ಲ. ರೊಕ್ಕ ಬಂದಮ್ಯಾಲೆ ತಗಳ್ರಿ ಅಂತ ಸಾಗಾಕ್ಯಂತ ಬಂದ್ರು. ಒಂದಲ್ಲ ಎರಡು ದಿನ ಅಲ್ಲ. ಆರು ತಿಂಗಳ ಇದನ್ನೇ ಸಾಗಕಿದ್ರು. ಅದಾದ್ಮೇಲೆ ದುಡಿಲಾರದವರ ಹೆಸರಮ್ಯಾಗ ಹಾಜರಿ ಹಾಕಿ ರೊಕ್ಕ ತಿಂದಾರಂತ ಗೊತ್ತಾತು. ಅವಾಗ ನಾವು ಎಲ್ಲಾರು ಕೂಲಿ ಕೆಲ್ಸ

ಮಾಡಿದವರು. ಮತ್ಯಾ ರೈತ ಸಂಘದವರು ಸೇರಿ ಇರಕಲ್‌ಗಡ ಪಂಚಾಯ್ತಿ ಮುಂದ ಮೂರ್ನಾಲ್ಕು ದಿನ ಟ್ರೈಕ್ ಮಾಡಿದ್ವಿ. ಮೂರ್ನಾಲ್ಕೂ ದಿನ ಟ್ರೈಕ್ ಮಾಡಿದ ಮ್ಯಾಲೆ ನಮಗ ದುಡದಂತ ಕೂಲಿ ಕೊಡ್ತೀವಿ ಅಂತ ಆಗಲಿ, ದುಡಿಯಾಕ ಕೆಲ್ಸ ಕೊಡ್ತೀವಂತಾಗಲಿ ಯಾರು ಹೇಳಲಿಲ್ಲ. ಮತ್ತೆ ನಮ್ಮನ್ನ ಯಾರು ಮಾತಾಡ್ಸಲಿಲ್ಲ. ಹಿಂಗಾದ್ರೆ ಇದು ಬಗಿಹರಿದಿಲ್ಲಂತ ನಮ್ ಇರಕಲ್‌ಗಡದವರು, ಇಂದರಗಿಯವರು, ಮೆತ್ತಗಲ್‌ವರು, ಹಾಸಗಲ್‌ವರು ಮತ್ಯಾ ಬೂದಗುಂಪದವರು ಸೇರಿ ಕೊಪ್ಪಳ ತಾಲೂಕ ಆಫೀಸಿನ ಮುಂದ ಮೂರು ದಿನ ಟ್ರೈಕ್ ಮಾಡಿದ್ವಿ. ಕೊಪ್ಪಳದಾಗ ಸತೆ ಯಾ ಆಫೀಸರ್ ಬಂದು ನಮಗ ಮಾತಾಡ್ಸಲಿಲ್ಲ. ಯಾಕ ಟ್ರೈಕ್ ಮಾಡ್ತೀರಿ ಅಂತ ಒಂದು ಮಾತು ಕೇಳಲಿಲ್ಲ. ಅವಾಗ ನಮ್ ಸಂಘದವರು ಮತ್ತೆ ಕೂಲಿಕಾರರು ಸೇರಿ ತಾಲೂಕ ಆಫೀಸಿಗೆ ಬೀಗ ಹಾಕಾಕ ಹೋಗಿದ್ದೆ ತಡ ಪೊಲೀಸ್ರು ಎಲ್ಲಿದ್ರೋ, ಎಲ್ಲಿಲ್ಲೋ ಬಂದು ಬಂದಿದ್ದೇನು ನಮಗೆ ದನಕ್ಕ ಬಡದಂಗ ಎಳೆದಾಡಿ ಮನಸ್ಸಿಗೆ ಬಂದಾಗ ಹೊಡ್ಯಾಕತ್ತಿದ್ರು. ಪೆಂಡಾಲಿಗೆ ಹಾಕಿದ್ದ ಕಟಿಗಿ ತಗಂಡು ನಮ್ ಕೂಲಿಕಾರರಿಗೆ ಮತ್ಯಾ ರೈತ ಸಂಘದವರಿಗೆ ಸಿಕ್ಕಸಿಕ್ಕಂಗ ಹೊಡದ್ರು. ಪೊಲೀಸರು ವಡ್ಯಾದು ನೋಡಿ ನಾನು ಓಡಿ ಹೋಗಾನಂತ ಓಡುಕತ್ತಿದ್ದೆ ಆಗ ಸೀರೆ ಸೆರಗು ಹಿಡಿದು, ಎಳೆದು ನನಗ ಕಟಿಗಿ ತಗಂಡು ವಡುದ್ರು. ಆ ಮ್ಯಾಲೆ ತುರುಬು ಹಿಡಿದು ಜಾಡ್ಸಿ ನೂಕಿಬುಟ್ರು. ಆಗ ನಾನು ತಾಲೂಕ ಆಫೀಸಿನ ಪಾಂಟಣಗಿಗೆ ಹೋಗಿ ಬಿದ್ದೆ. ಬಿದ್ದಾಗ ನನಗ ಮೂರ್ಚೆ ಹೋಗಿಬುಡಿತು. ಮುಂದ ಏನಾಯಿತೋ ಗೊತ್ತಿಲ್ಲ. ಅವಾಗ ನಮ್ ಸಂಘದವರು ಸರಕಾರ ದವಾಖಾನಿ ಅಂಬ್ಯುಲೆನ್ಸ್‌ಗೆ ಪೋನು ಮಾಡಿ, ನನ್ನ ದವಾಖಾನಿಗೆ ಅಡ್ಮಿಂಟ್ ಮಾಡಿದ್ರಂತ. ಪೊಲೀಸರು ದಬ್ಬಿದಾಗ ಪಾಂಟಣಿಗಿ ಹೊಟ್ಟೆಗೆ ಬಡಿದು ಬಾರೀ ಪೆಟ್ಟು ಆಗಿ ಗರ್ಭಕೋಶಕ್ಕ ಹೊಡ್ತಾ ಬಿದ್ದಾದ. ಅಂಗಾಗಿ ಅಪರೇಶನ್ ಮಾಡ್ಬೇಕು. ಐವತ್ತರಿಂದ ಅರವತ್ತು ಸಾವಿರ ರೂಪಾಯಿ ಖರ್ಚು ಬರ್ತಾದ ಅಂತ ಹೇಳಿದ್ರು. ಅವಾಗ ನಾನು ಏನು ಮಾಡ್ಬೇಕು ಮೊದಲೇ ನಾವು ಬಡುವುರು. ಅಡಿವ್ಯಾಗ ಎಕರೆ ಹೊಲ ಇಲ್ಲ. ಊರಾಗ ಅಂಗೈ ಅಗಲ ಮನೆ ಇಲ್ಲ. ಒಂದು ಹತ್ತು ವರ್ಷದ ಹಿಂದ ಸರಕಾರದ ಕಡೆಯಿಂದ ಒಂದು ಜನತಾ ಮನೆ ಆಗಿತ್ತು. ಅದ್ಬುಟ್ರೆ ನನಗ ಸರಕಾರದಿಂದ ಏನು ಆಗಿಲ್ಲ. ಮನ್ಯಾಗ ಸಣ್ಣ–ಸಣ್ಣ ಮಕ್ಳು ಐದಾವ. ಜೀವ್ನ ನಡಿಸೋದೆ ಕಷ್ಟ ಆಗ್ಯಾದ ಅಂತದ್ರಾಗ ಐವತ್ತು ಅರವತ್ತು ಸಾವುರ ಕೊಟ್ಟು ಆಪರೇಶನ್ ಮಾಡ್ಸಿಗೆಂಬಾದು ನಮ್ಮಿಂದ ಆಗ್ತಾದೇನು? ಹಂಗಾಗಿ ಏನಾರ ಆಗಲಿ ಅಂತೇಳಿ ಹತ್ತುದಿನ ದವಾಖಾನ್ಯಾಗ ಇದ್ದು, ಆಮ್ಯಾಲೆ ಆ ದೇವರು ಇಟ್ಟಂಗ ಆಗ್ತಾದ 'ಬದುಕಿದ್ರೆ ಆ ದೇವರು ಪಾಲು ಸತ್ರೆ ಮಣ್ಣು ಪಾಲು' ಅಂತ ದೇವರ ಮ್ಯಾಲೆ ಬಾರ ಹಾಕಿ ಮನಿಗ್ಯಾ ಡಿಶ್ಚಾರ್ಜ್ ಮಾಡಿಕೆಂಡು ಬಂದ್ಬುಟ್ಟೆ. ಮನಿಗೆ ಬಂದು ಹತ್ತು ದಿನಕ್ಕ ಹೊಟ್ಟೆ ಬಾಹು ಬಂದು ಉಬ್ಬಿಕೆಂತು. ಕಂಡಂಗ ನೋವು ಆಗಕತ್ತಿತು. ಏನು ಮಾಡಾಕ ದಾರಿ ಇಲ್ಲದಂಗ ಆಯಿತು. ನಮ್ ತವರು ಮನಿಯವ್ರು ಬಂದು ದವಾಖಾನಿಗೆ ಅಡ್ಮಿಂಟ್ ಮಾಡಿ ತೋರಿಸಿದ್ರು. ಆವಾಗ ಡಾಕ್ಟ್ರು ಗರ್ಭಕೋಶಕ್ಕ ಪೆಟ್ಟಾಗಿದ್ರಿಂದ ಆಪರೇಶನ್ ಮಾಡಿ ಗರ್ಭಕೋಶ ತೆಗೆದುಹಾಕಿದ್ರು. ನೋಡ್ರಿ ಸಾರ್ ನಮ್ ಕತೆ ಹಿಂಗಾದ. ಯೋಜನದಾಗ ದುಡದಂತ ಕೂಲಿ ಕೇಳಾಕ ಹೋದ್ರ ನಮಗ ಈ ಗತಿ ಮಾಡ್ಯಾರ. ಹಿಂಗ ಮಾಡಿದ್ರೆ ನಮ್ಮಂತ ಬಡವರು ಎಲ್ಲಿಗೆ ಹೋಗ್ಬೇಕು ನಮ್ಮಂತ ಬಡಜನ ಯಂಗ ಬದುಕ್ಬೇಕು. ದುಡದಂತ ಕೂಲಿ ಕೊಡ್ಲಿಲ್ಲ. ಮತ್ತೆ ನಮ್ಮ್ಯಾಲೇ ಕೇಸ್ ಮಾಡ್ಯಾರ. ದುಡದಂತ ಕೂಲಿ ಕೇಳಾಕ ಹೋಗಿ ಬಡಿಸಿಗೆಂಡಿದ್ದು ಒಂದಾ, ಐವತ್ತರಿಂದ ಅರವತ್ತು ಸಾವುರ ದವಾಖಾನಿಗೆ ಇಟ್ಟಿದ್ದು ಒಂದಾ. ಮತ್ತೆ ನಮ್ಮ್ಯಾಲೆ ಕೇಸ್

ಮಾಡಿದ್ದು ಒಂದಾ ಇದು ಯಂಗ ಐತಿ ನೀವೆ ನೋಡ್ರಿ. ಇದು ಏನಿದ್ರೆ ಒಂಟಿ ಹೆಣ್ಮಕ್ಕಳು ಬಡವುರು ಬದ್ಕಂತ ಕಾಲನೇ ಅಲ್ಲ ನೋಡ್ರಿ. ಮಾಡಿಕೆಂಡು ತಿಂದ್ರೆ ಮಂದಿ ಕಾಟ, ಬೇಡಿಕೆಂಡು ತಿಂದ್ರೆ ನಾಯಿ ಕಾಟಂತ ಹಂಗ ಆಗೈತಿ ನಮ್ ಬಾಳೇವು" ಎಂದು ತಮ್ಮ ನೋವನ್ನು ತೋಡಿಕೊಂಡರು. ಯೋಜನೆ ರೂಪಿತವಾಗಿರುವುದು ಬಡಜನರ ಅಭಿವೃದ್ಧಿಗಾಗಿ. ಆದರೆ ಈ ಯೋಜನೆ ಕಾರ್ಯಾನುಷ್ಠಾನಕ್ಕೆ ಬರುವ ಹೊತ್ತಿಗೆ ಅದು ಉಳ್ಳವರ ಪಾಲಾಗಿರುತ್ತದೆ. ಇದನ್ನು ಪ್ರಶ್ನಿಸಿದ ಜನರನ್ನು ಹಿಂಸೆಗೆ ದೂಡಲಾಗುತ್ತದೆ. ಇದು ಸಮಾಜದಲ್ಲಿನ ನೈಜ ಸ್ಥಿತಿ. ಇಲ್ಲಿ ಅನ್ನಪೂರ್ಣಮ್ಮ ದುಡಿದ ಕೂಲಿ ಕೇಳಲು ಹೋಗಿ ತನ್ನ ಜೀವನ ಪೂರ್ತಿ ನ್ಯಾಯಾಲಯಕ್ಕೆ ಓಡಾಡುವಂತಾಗಿದ್ದು ಮತ್ತು ತನ್ನ ಗರ್ಭಕೋಶವನ್ನೇ ತೆಗೆಸಿಕೊಂಡದ್ದು ಇವು ಸಮಾಜದಲ್ಲಿನ ಅಮಾನವೀಯ ಮೌಲ್ಯಗಳಿಗೆ ಹಿಡಿದ ಕನ್ನಡಿಯಂತಿದೆ.

ಬೂದಗುಂಪ ಗ್ರಾಮದ 55 ವರ್ಷದ ಮುಸ್ಲಿಂ ಸಮುದಾಯದ ಅನಕ್ಷರಸ್ಥ ಮಹಿಳೆ ತಾಹಿರಾ ಬೇಗಂ ಮಾತುಗಳು ಈ ಸಮಸ್ಯೆಯ ಮತ್ತೊಂದು ಮುಖವನ್ನು ಬಿಚ್ಚಿಡುತ್ತದೆ. ಅವರ ಮಾತುಗಳಲ್ಲೆ ಹೇಳುವುದಾದರೆ "ನೋಡ್ರಿ ಸಾಹೇಬ್ರೆ ಈ ಹಾಳಾದ ಉದ್ಯೋಗ ಖಾತ್ರಿ ಕೆಲ್ಸಕ್ಕೆ ಹೋಗಿ ಕೋರ್ಟಿಗೆ ತಿರುಗ್ಯಾಡದು ಬಂದಾದ. ಮತ್ತೆ ನಮ್ ಊರಾಗ ನಮ್ಮನ್ನ ಜಾತಿಯಿಂದ ಬ್ಯಾರೆ ಇಟ್ಟಾರ" ಎಂದು ನಿಟ್ಟುಸಿರು ಬಿಟ್ಟರು. ಜಾತಿಯಿಂದ ಬೇರೆ ಇಟ್ಟಿರುವುದಕ್ಕೆ ಕಾರಣ ಕೇಳಿದಾಗ "ಸಾಹೇಬ್ರೆ ನಾವು ತುಂಬಾ ಬಡವುರು ಐದೀವಿ. ಹಂಗಾಗಿ ದುಡಿಬೇಕು ತಿನ್ನಬೇಕು ಇಲ್ಲಂದ್ರೆ ಒಂದು ದಿನ ಮನ್ಯಾಗ ಕುಂತ್ರ ಜೀವ್ನ ನಡ್ಯಾದಿಲ್ಲ. ಹಂಗಾಗಿ ಊರಾಗಿನ ತಿಳಿದವರು ಹೇಳಿದ್ರು ಸರಕಾರ ಬಡಜನಕ್ಕಾಗಿ ಉದ್ಯೋಗ ಖಾತ್ರಿ ಯೋಜನೆಯಾಗ ಪಂಚಾಯ್ತಿ ಕಡೆಯಿಂದ ಒಂದು ವರ್ಷದಾಗ ನೂರು ದಿನ ಕೆಲ್ಸ ಕೊಡ್ಬೇಕು ಅಂತೇಳಿ ಮಾಡ್ಯಾದ. ಆದ್ರ ಕೂಲಿ ಕೆಲಸ ಬಂದು ಒಂದು ವರ್ಷ ಆಯಿತು. ಇಲ್ಲಿತನ ನಮ್ಮೂರಾಗ ದುಡ್ಕಂಡು ತಿನ್ನವರಿಗೆ ಕೆಲಸಾನೇ ಕೊಟ್ಟಿಲ್ಲ. ಬ್ಯಾರೆ ಊರಾಗ ಬ್ಯಾಸಿಗಿ ಟೈಂದಾಗ ಕೆಲಸ ಕೊಟ್ಟಾರ. ಹಿಂಗಾದ್ರೆ ಪಂಚಾಯ್ತಿಯವರು ಮಾತುಕೇಳಾದಿಲ್ಲ. ಕೂಲಿ ಮಾಡಂತ ಹೆಣ್ಮಕ್ಕಳು ಎಲ್ಲಾರು ಸೇರಿ ರೈತ ಸಂಘ ಸೇರ್ರಿ ನಾವು ನಿಮ್ಮಿಂದ ಇರ್ತಿವಿ. ಎಲ್ಲಾರು ಸೇರಿ ಕೆಲಸ ಕೊಡ್ಬೇಕು ಅಂತೇಳಿ ಹೋರಾಟ ಮಾಡಾನು ಅಂತ ಹೇಳಿದ್ರು. ಅದಕ್ಕ ನಾನು ರೈತ ಸಂಘಕ್ಕೆ ಸೇರಿದೆ. ಆಮ್ಯಾಲೆ ನಮ್ ಸಂಘದ ಕಡೆಯಿಂದ ಮಹಿಳೆಯರೆಲ್ಲ ಸೇರಿ, ಕುಡ್ಯಾ ನೀರಿನ ಸಲುವಾಗಿ ಟ್ರೈಕ್ (ಸ್ಟ್ರೈಕ್, ಪ್ರತಿಭಟನೆ) ಮಾಡಿದ್ವಿ. ಆಮ್ಯಾಲೆ ಊರು ಒಳಗಿನ ರೋಡ್ ಕೆಟ್ಟಾದ ಅವುನ್ನ ಸರಿ ಮಾಡಬೇಕು ಅಂತೇಳಿ ಟ್ರೈಕ್ ಮಾಡಿದ್ವಿ. ಆಮ್ಯಾಲೆ ಪಂಚಾಯ್ತಿಯವರು ಕುಡ್ಯಾನೀರಿನ ಯವಸ್ಥೆ ಮಾಡಿದ್ರು. ಊರಾಗಿನ ರೋಡ್ ಮಾಡಿದ್ರು. ಇದೆಲ್ಲ ಆದ್ಮೇಲೆ ದುಡಿಯಾಕ ಕೆಲಸ ಕೊಡ್ಬೇಕು ಅಂತೇಳಿ ನಮ್ಮ ಸಂಘದ ಕಡೆಯಿಂದ ಅರ್ಜಿ ಕೊಟ್ಟು ಕೆಲಸ ತಗಂಡ್ವಿ. ನಾನು ಸಂಘಕ್ಕ ಯಾವಾಗ ಸೇರಿದ್ನೋ ಆವಾಗಿಂದ ಎಗಲ ಮ್ಯಾಲೆ ಹಸಿರು ಟವಲ್ ಹಾಕ್ಕೆಂಡು ಟ್ರೈಕ್ ಮಾಡಾಕ ಹೋಗ್ತಿದ್ದೆ. ಮತ್ತೆ ಬೆಂಗಳೂರಾಗ ಮೀಟಿಂಗ್ ಏನಾರ ಇದ್ರೆ ಹೋಗ್ತಿದ್ದೆ. ಎಲ್ಲ್ಯಾದರೂ ಹೋರಾಟ ಇದ್ರೆ, ಯಾವದಾದ್ರೆ ಪಂಚಾಯ್ತಿಯಾಗ ಕೂಲಿಕಾರರಿಗೆ ಕೂಲಿ ಹಣ ಕೊಟ್ಟಿಲ್ಲ ಅಂದ್ರೆ ಟ್ರೈಕ್ ಮಾಡತ್ತಿದ್ವಿ. ಮತ್ತೆ ನಮ್ಮೂರಾಗ ನಾಲ್ಕುಜನ ಉದ್ಯೋಗ ಖಾತ್ರಿ ಕೆಲಸಕ್ಕೆ ಹೋದಂಗ ನಾನು ನನ್ನ ಸೊಸಿ ಇಬ್ರು ಕೆಲಸಕ್ಕೆ ಹೋಗ್ತಿದ್ವಿ. ಆದ್ರೆ ಇದ್ಯಾವದು ನಮ್ಮ ಜಾತಿಯವರಿಗೆ ಸೇರಿಕಿ ಇರಲಿಲ್ಲ. ಯಾಕಂದ್ರ ನಮ್ ಜಾತಿಯಾಗ ಮನೆಯಿಂದ ಹೊರಗಡೆ ಬಂದ್ರೆ ಎಲ್ಲಾ ಹೆಣ್ಣು ಮಕ್ಕಳು ಬುರ್ಕಾ ಹಾಕೆಂಡು ಹೊರಗಡೆ ಹೋಗ್ತಾರ. ಮತ್ತೆ

ನಮ್ ಜಾತಿಯಾಗ ಯಾರು ಟ್ರೈಕ್ ಮಾಡಾಕ ಆಗಲಿ, ಹೋರಾಟ ಮಾಡಾಕ ಆಗಲಿ, ಚಳವಳಿ ಮಾಡಾಕ ಆಗಲಿ, ಯಾರು ಹೋಗಾದಿಲ್ಲ. ಆದ್ರೆ ನಾನು ಸಂಘದಾಗ ಐದೀನಿ ನಾಲ್ಕು ಜನಕ್ಕ ಒಳ್ಳೆದಾಗ್ತಾದ ಅಂದ್ರೆ ನಾನ್ಯಾಕ ಟ್ರೈಕ್ ಮಾಡಾಕ ಹೋಗ್ಬಾರದು. ನಾನು ತಪ್ಪೇನು ಮಾಡಿಲ್ಲ ಅಂತ ತಿಳ್ಕಂಡು ಯಾರು ಏನೇ ಆಂದ್ರೂನ್ ನಾನು ಇಂತವುಕೆಲ್ಲ ಹೋಗ್ತಿದ್ದೆ. ಆಮ್ಯಾಲೆ ಏನಾಯಿತಂದ್ರೆ ಇಡೀ ನಮ್ ಜಾತಿಯವರೆಲ್ಲ ಬಂದು ನೀನು ಉದ್ಯೋಗ ಖಾತ್ರಿ ಕೆಲಸಕ್ಕೆ ಹೋಗಬಾರದು, ನೀನು ಸಂಘದಾಗ ಇರಬಾರದು, ಹಸಿರು ಟವಲ್ ಹಾಕಬಾರದು, ನೀನು ಇನ್ನು ಮುಂದ ಎಲ್ಲಿಗಾದ್ರೆ ಹೋದ್ರೆ ಬುರ್ಕಾ ಹಾಕ್ಕೊಂಡು ಅಡ್ಯಾಡಬೇಕು ಅಂತ ಬೆದರಕಿ ಹಾಕಿದ್ರು. ನಮ್ ಧರ್ಮದ ಗುರುಗಳು ಬಂದು ನಿನ್ನ ನಮ್ ಧರ್ಮದಾಗಿನಿಂದ ಹೊರಾಗ ಇಡ್ತಿವಿ ಅಂತ ಹೆದರಿಸಿದ್ರು. ಆದ್ರೆ ನಾನು ಇದು ಯಾವದು ಲೆಕ್ಕಕ್ಕೆ ತಗಾಲಿಲ್ಲ. ಯಾಕಂದ್ರೆ ಎಲ್ಲಾರ ಮನಿ ಪರಿಸ್ಥಿತಿ ಒಂದ್ರೀತಿ ಇದ್ರೆ ನಮ್ ಮನೆ ಪರಿಸ್ಥಿತಿ ಬ್ಯಾರೆ ಐತಿ. ಯಾಕಂದ್ರೆ ನನ್ ಗಂಡ ಇರಾತನ ನಾನು ಹೊರಗಡೆ ಕೂಲಿ ಕೆಲಸಕ್ಕೆ ಹೋಗಿದಿಲ್ಲ. ನನ್ ಗಂಡ ಸತ್ತಮ್ಯಾಲೆ ಮಕ್ಕಳು ಸಲುಹುಬೇಕಾದ್ರೆ, ಸಂಸಾರ ನಿಬಾಯಿಸಬೇಕಾದ್ರೆ ನಾನು ಕೂಲಿ ಕೆಲಸಕ್ಕೆ ಹೋಗ್ಬೇಕಾತು. ನನಗ ಇಬ್ರು ಗಣ ಮಕ್ಕಳು, ಹಿರಿಮಗನಿಗಿ ಮದಿವಿ ಮಾಡಿದ್ದೆ. ಆದ್ರ ಮದಿವಿ ಮಾಡಿ ಬಹಳ ವರ್ಷಕ್ಕ ಅವನಿಗೆ ಜಡ್ಡು ಬಂದು ತೀರಿಕೆಂಡ. ಆಮ್ಯಾಲ ನನ್ನ ಸಣ್ಣ ಮಗನೂ ಆತ್ಮಹತ್ಯ ಮಾಡಿಕೆಂಡು ತೀರಿಕೆಂಡ. ಈಗ ಇರೋದು ಇಬ್ರೆ. ನಾನು ಮತ್ತ ನನ್ನ ಸೊಸಿ ಮಾತ್ರ. ಇವತ್ತು ಇಬ್ಬರು ದುಡದು ನಮ್ಮ ಕುಟುಂಬ ಸಲಹುತೀವಿ. ನಮ್ ಕಷ್ಟ ಹಿಂಗಿರಬೇಕಾದ್ರೆ ಈ ಹಾಳಾದ ಉದ್ಯೋಗ ಖಾತ್ರಿ ಯೋಜನದಾಗ ನನ್ ಸೊಸೆ, ನಾನು ಒಬ್ಬೊಬ್ರು ನಲವತ್ತೈದು ದಿನ ದುಡದೀವಿ. ಆದ್ರೆ ಪಂಚಾಯ್ತಿಯವರು ದುಡದಂತ ಕೂಲಿನೇ ಕೊಡ್ಲಿಲ್ಲ. ಆಮ್ಯಾಲೆ ನಾವು ದುಡದ ಕೂಲಿ ಕೇಳಿದ್ದಕ್ಕ ನಮ್ಮ ಮ್ಯಾಲ ಲಾಟಿಚಾರ್ಜ್ ಮಾಡಿ ಕೇಸ್ ಮಾಡ್ಯಾರ. ಈಗ ಕೋರ್ಟಿಗೆ ಅಡ್ಯಾಡಕತ್ತೀವಿ. ಈಗ ನಮ್ ಧರ್ಮದ ಗುರುಗಳು ಏನಂತಾರ ಅಂದ್ರೆ, ನಾವು ಹೇಳಿದ ಮಾತು ಕೇಳಲಿಲ್ಲ. ನಮ್ ಜಾತಿಗೆ ಅವಮಾನ ಮಾಡಿದ್ಲು. ಕುರಾನ್‌ಗೆ ವಿರುದ್ಧವಾಗಿ ನಡಕಂಡ್ಲು. ಮತ್ತೆ ಬುರ್ಕಾ ಬುಟ್ಟು ಹಸಿರು ಟವಲ್ ಹಾಕ್ಕೆಂಡ್ ನಮ್ ಧರ್ಮಕ್ಕ ದ್ರೋಹ ಮಾಡಿದ್ಲು. ಹೋರಾಟ, ಟ್ರೈಕ್ ಮತ್ತೆ ಚಳುವಳಿ ಅಂತ ಮಾಡಾಕ ಹೋಗಿ ನಮ್ ಮುಸ್ಲಿಂ ಜಾತಿಗೆ ಅವಮಾನ ಮಾಡಿದ್ಲು ಹಂಗಾಗಿ ಇವತ್ತು ಆ ಅಲ್ಲಾನೇ ಬಂದು ನಿನಗ ತಕ್ಕಶಿಕ್ಷೆ ಕೊಟ್ಟಾನ. ನಿನಗ ಹಿಂಗ ಆಗಬೇಕಾಗಿತ್ತು ಹಂಗಾಗಿ ಆ ಅಲ್ಲಾ ಈ ರೂಪದಲ್ಲಿ ಬಂದು ಶಿಕ್ಷೆ ಕೊಟ್ಟಾನ ಅಂತೇಳಿ ನಮ್ ಧರ್ಮದ ಗುರುಗಳು ಮತ್ತೆ ಹಿಡೀ ನಮ್ ಜಾತಿ ಜನ ಮಾತಾಡಿಕೆಂತಾರ. ಹಂಗಾಗಿ ಇವತ್ತು ನಮ್ ಮನೆ ಒಂದನ್ನ ಜಾತಿಯಿಂದ ಬ್ಯಾರೆ ಇಟ್ಟಾರ. ಮತ್ತೆ ಒಬ್ಬೊಬ್ರು ಒಂದೊಂದು ಮಾತು ಆಡ್ತಾರ. ಸಣ್ಣ ವಯಸ್ಸಿಗೆ ಗಂಡ ಸತ್ರು ಬುದ್ದಿ ಬರಲಿಲ್ಲ ಅಂತ ಆಡಿಕೆಳ್ತಾರ. ಅಂಗೆ ಒಬ್ಬ ಮೊಮ್ಮಗಳು ಮದ್ವಿ ವಯಸ್ಸಿಗೆ ಬಂದಾಳ. ಆಕಿಗೆ ಮದ್ವಿ ಮಾಡಬೇಕಂದ್ರೆ ಯಾರು ನಮ್ ಮನ್ಯಾಗ ಬೀಗಸ್ತಾನ ಮಾಡಾಕ ಮುಂದ ಬರಲಿಲ್ಲ. ಬೀಗಸ್ತನ ಮಾಡಾಕ ಬಂದವರನ್ನೆಲ್ಲ ಅವರು ಮನ್ಯಾಗ ಬೀಗಸ್ತಾನ ಮಾಡಬ್ಯಾಡ್ರಿ. ಅವರ ಮನೆತನ ಚಲೋ ಇಲ್ಲ. ಅವರನ್ನ ನಮ್ ಜಾತಿಯಿಂದ ಹೊರಗಿಟ್ಟೀವಿ ಅಂತೇಳಿ ಹುಡಿಗಿನ್ನ ನೋಡಾಕ ಬಂದವರಿಗೆಲ್ಲ ಹೇಳಿ ಕಳಸ್ತಿದ್ರು. ಹಂಗಾಗಿ ನನ್ ಮೊಮ್ಮಗಳಿಗೆ ವರ ಬರಾದಿಲ್ಲಂತೇಳಿ ನಮ್ ಸಂಬಂಧಿಕರಾಗ ಮದ್ವಿ ಫಿಕ್ಸ್ ಮಾಡೀವಿ. ಈ ಹಾಳಾದ ಉದ್ಯೋಗ ಖಾತ್ರಿ ಯೋಜನೆ ಸೇರಿ, ಮತ್ತೆ ಈ ರೈತ ಸಂಘ ಅಂತೇಳಿ ಸೇರಿ ಇವತ್ತು ನಮ್ ಜಾತಿಯವರೆಲ್ಲ ನಮ್ಮನ್ನ ದೂರ ಇಟ್ಟಾರ. ನೋಡ್ರಿ ನಮಗ

ಈ ಬ್ಯಾಸಿಗಿ ಟೈಂದಾಗ ಜೀವ್ನ ನಡಸಾದ ಬಾಳ ಕಷ್ಟ ಆಗ್ಯಾದ. ಯಾಕಂದ್ರ ನಾವು ಬರೀ ಮನ್ಯಾಗ ಹೆಣ್ಮಕ್ಕಳು ಇದ್ದವರು. ಮನ್ಯಾಗ ಗಣಮಕ್ಳು ಇದ್ದವರು ಆದ್ರೆ ಬ್ಯಾಸಿಗಿ ಟೈಮ್‌ದಾಗ ದುಡಿಯಾಕ ಬೆಂಗಳೂರು, ಪೂನಾ, ಗೋವಾಕ್ಕ ದುಡಿಯಾಕ ಹೋಗ್ತಾರ. ಆದ್ರೆ ನಾವು ಬರೀ ಹೆಣ್ಣುಮಕ್ಕಳು ಇದ್ದವರು ಹೋಗಾಕ ಆಗ್ತಾದೇನು? ಗಂಡ ಸತ್ತ ಒಂಟಿ ಹೆಣ್ಣು ಮಕ್ಕಳನ್ನ ಈ ದುನಿಯಾ ಬಾಳಾ ಕೆಟ್ಟದಾಗಿ ನೋಡ್ತಾದ. ಅಂತದ್ರಾಗ ದೂರದ ಊರಿಗೆ ದುಡಿಯಾಕ ಹೋದ್ರೆ ಈ ಜನ ಸುಮ್ನೆ ಬಿಡ್ತಾದೇನು? ಹಂಗಾಗಿ ನಾವು ಇದ್ದು ಊರಾಗ ದುಡಕಂಡು ತಿನ್ನಾನು ಅಂದ್ರೆ ಪರಿಸ್ಥಿತಿ ಹಿಂಗಾದ ನೋಡ್ರಿ. ನಮಗ ಅಡಿವ್ಯಾಗ ಹೊಲ ಇಲ್ಲ ಊರಾಗ ಮನೆ ಇಲ್ಲ ದುಡಿಬೇಕು ತಿನ್ಬೇಕು. ಅಂತದ್ರಾಗ ಪ್ರತೀ ತಿಂಗಳು ಕೋರ್ಟಿಗೆ ಅಡ್ಯಾಡಕತ್ತೀವಿ. ಕೋರ್ಟಿಗೆ ಅಡ್ಯಾಡದು ಸುಮ್ನೆ ಆಗ್ತಾದ? ಒಂದ್ಸಲ ಕೋರ್ಟಿಗೆ ಹೋದ್ರ ಎರಡ್ನೂರು ರೂಪಾಯಿ ಖರ್ಚು ಬರ್ತಾದ. ನಾವು ದಿನ ಐವತ್ತು–ಅರವತ್ತು ರೂಪಾಯಿ ದುಡಿತೀವಿ ಇದರಾಗ ಸಂಸಾರ ನಡುಸಾದೆ ಕಷ್ಟ ಐತಿ. ಇಂತದ್ರಾಗ ತಿಂಗಳಾ–ತಿಂಗಳಾ ಕೋರ್ಟಿಗೆ ಹೋಗಾಕ ಎರಡ್ನೂರು ರೂಪಾಯಿ ಎಲ್ಲಿಂದ ತರಬೇಕು. ಹಂಗಾಗಿ ಸಾಲಮಾಡಿ ಕೋರ್ಟಿಗೆ ತಿರುಗ್ಯಾಡಂಗ ಆಗ್ಯಾದ ನಮ್ ಬಾಳೇವು." ಎಂದು ಕಣ್ಣೀರಿಟ್ಟಳು.

ತಾಹಿರಾಬೇಗಂ ಅವರ ಮಾತುಗಳು ಹಲವು ಸಂಗತಿಗಳನ್ನು ಹೊರ ಹಾಕುತ್ತವೆ. ಹೈದರಾಬಾದ್ ಕರ್ನಾಟಕವು ಹಿಂದೂ–ಮುಸ್ಲಿಂ ಸಮುದಾಯದವರು ಸಾಮರಸ್ಯದಿಂದ ಬಾಳುವ ಪ್ರದೇಶವಾಗಿದೆ. ಆದರೆ ಈ ಎರಡೂ ಧರ್ಮದ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಸಮಸ್ಯೆಗಳಿವೆ. ಏಕೆಂದರೆ ತಾಹಿರಾ ಬೇಗಂ ಜತೆಗೆ ರೈತ ಸಂಘಟನೆಯನ್ನು ಸೇರಿದ ಮತ್ತು ಪ್ರತಿಭಟನೆಯಲ್ಲಿ ಪಾಲ್ಗೊಂಡವರಲ್ಲಿ ಹಿಂದೂ ಧರ್ಮಕ್ಕೆ ಸೇರಿದ ಮಹಿಳೆಯರೂ ಇದ್ದರು. ಆದರೆ ಇವರುಗಳು ಅನುಭವಿಸಿದ ಕಷ್ಟಗಳು ಭಿನ್ನವಾಗಿವೆ. ತಾಹಿರಾ ಬೇಗಂ ಅವರು ಅನುಭವಿಸುತ್ತಿರುವುದು ಒಂದು ತಾನು ಜಾತಿಯಿಂದ ಮುಸ್ಲೀಂ ಎನ್ನುವ ಕಾರಣಕ್ಕಾಗಿ. ಇನ್ನೊಂದು ತಾನು ಹೆಣ್ಣು ಎನ್ನುವ ಕಾರಣಕ್ಕಾಗಿ. ಇಲ್ಲಿಯೂ ಧಾರ್ಮಿಕ ಪುರುಷರ ದಬ್ಬಾಳಿಕೆಯು ತಾಹಿರಾ ಬೇಗಂ ಮೇಲೆ ಆಗಿರುವುದನ್ನು ನೋಡಬಹುದು. ಮುಖ್ಯವಾಗಿ ಇಸ್ಲಾಂ ಧರ್ಮದಲ್ಲಿ ಮಹಿಳೆಯರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದೇ ಅಪರೂಪ. ಅಂತಹದ್ದರಲ್ಲಿ ತಾಹಿರಾ ಬೇಗಂ ಸಾರ್ವಜನಿಕವಾಗಿ ಕಾಣಿಸಿಕೊಂಡರು. ಹಾಗೆಯೇ ಯಾರ ಒಪ್ಪಿಗೆಯನ್ನೂ ಕೇಳದೆ (ಧಾರ್ಮಿಕ ಮುಖಂಡರು) ರೈತ ಸಂಘಟನೆಯನ್ನು ಸೇರಿದುದು, ಬುರುಖಾದ ಜಾಗದಲ್ಲಿ ಹಸಿರು ಟವೆಲ್ಲನ್ನು ಹಾಕಿಕೊಂಡಿದುದು ಇವು ಧಾರ್ಮಿಕ ಮುಖಂಡರನ್ನು ನಿದ್ರೆಗೆಡಿಸಿದ್ದವು. ಹೀಗೆ ಮಾಡುವುದು ಧರ್ಮದ ವಿರುದ್ಧ ನಡೆಯಾಗಿದೆ ಎಂಬುದು ಅವರ ವಾದವಾಗಿತ್ತು. ಈ ಎಲ್ಲಾವುಗಳನ್ನು ಸಹಿಸದ ಕೆಲವು ಮುಖಂಡರು ತಾಹಿರಾ ಬೇಗಂಳಿಗೆ, ಇವುಗಳೆಲ್ಲವುಗಳನ್ನು ಬಿಡುವಂತೆ ಒಂದು ಸಾರಿ ಎಚ್ಚರಿಕೆಯನ್ನೂ ಕೊಟ್ಟಿದ್ದರು. ಆದರೆ ಇದಾವುದನ್ನೂ ಕೇಳದೆ ಧಿಕ್ಕರಿಸಿದ್ದಳು. ಆ ಕಾರಣಕ್ಕಾಗಿ ತಾಹಿರಾ ಬೇಗಂಳನ್ನು ತಮ್ಮ ಧರ್ಮದಿಂದ, ಜಾತಿಯಿಂದ ಹೊರ ಹಾಕಿದ್ದರು. ಆದರೆ ಈ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅವಳಿಗೆ ಅನಿವಾರ್ಯವಾಗಿತ್ತು. ಏಕೆಂದರೆ ಕಿತ್ತು ತಿನ್ನುವ ಬಡತನದಿಂದ ಜೀವನ ನಡೆಸುವುದೇ ಕಷ್ಟಕರವಾಗಿದ್ದಾಗ, ಅದನ್ನು ನಿಭಾಯಿಸುವುದು ಇನ್ನೂ ಕಷ್ಟಕರವಾಗಿತ್ತು. ಅಂತಹ ಸಂದರ್ಭದಲ್ಲಿ ನರೇಗಾ ಯೋಜನೆ ಒಂದು ಆಶಾ ಭಾವನೆಯನ್ನು ತಂದಿತ್ತು. ಆ ಕಾರಣಕ್ಕಾಗಿ ಸಾರ್ವಜನಿಕ ವಲಯದಲ್ಲಿ ಕಾಣಿಸಿಕೊಂಡಿದ್ದಳು. ಆದರೆ

ಇದೂ ಕೂಡ ತಮ್ಮ ಜೀವನಕ್ಕೆ ಮುಳುವಾಯಿತು. ರೈತ ಸಂಘಟನೆಗೆ ಮತ್ತು ಉದ್ಯೋಗ ಖಾತರಿ ಯೋಜನೆಗೆ ಸೇರಿಕೊಂಡಿದ್ದಕ್ಕಾಗಿ ತಾನು ನ್ಯಾಯಾಲಯಕ್ಕೆ ತಿರುಗಾಡಬೇಕಾದ ಪರಿಸ್ಥಿತಿ ಒದಗಿ ಬಂತು ಮತ್ತು ಹೀಗೆ ಮಾಡಿದ ಕಾರಣಕ್ಕಾಗಿಯೇ ಅಲ್ಲಾನೆ ನಿನಗೆ ಸರಿಯಾದ ಶಿಕ್ಷೆ ಕೊಟ್ಟಿದ್ದಾನೆ ಎಂಬಂತಹ ಮೂದಲಿಕೆಯ ಮಾತುಗಳು ತಮ್ಮ ಧರ್ಮದವರಿಂದ ಎದುರಿಸಬೇಕಾಯಿತು. ಆ ಕಾರಣಕ್ಕಾಗಿಯೇ ತನ್ನ ಮೊಮ್ಮಗಳ ಮದುವೆಗಾಗಿ ಹಲವಾರು ಕಷ್ಟಗಳನ್ನು ಅನುಭವಿಸಬೇಕಾಯಿತು ಎನ್ನುವ ತಾಹಿರಾ ಬೇಗಂಳಿಗೆ ತುಂಬಾ ನೋವಿನ ಸಂಗತಿಯಾಗಿ ಕಾಡತೊಡಗಿವೆ. ಇನ್ನು ಸರಕಾರಿ ಯೋಜನೆಗಳಲ್ಲಿ ಕೆಲಸ ಮಾಡುವುದಕ್ಕಿಂತ ಬೇರೆ ಊರುಗಳಿಗೆ ವಲಸೆ ಹೋಗಿ ತಮ್ಮ ಸ್ವಂತ ಇಚ್ಛೆಯಿಂದ ದುಡಿಯುವುದೇ ಉತ್ತಮ ಎಂಬುದು ಮತ್ತು "ಈ ಹಾಳಾದ ಉದ್ಯೋಗ ಖಾತ್ರಿ ಕೆಲ್ಸಕ್ಕೆ ಹೋಗಿ ಕೋರ್ಟಿಗೆ ತಿರುಗ್ಯಾಡದು ಬಂದಾದ" ಎಂಬ ಧ್ವನಿ ಪದೇ ಪದೇ ತಾಹಿರಾ ಬೇಗಂ ಮಾತಿನಲ್ಲಿ ವ್ಯಕ್ತವಾಗಿರುವುದು ಉದ್ಯೋಗ ಖಾತರಿ ಯೋಜನೆಗೆ ಹಿಡಿದ ಕನ್ನಡಿಯಂತಿದೆ. ಪ್ರಾಚೀನ ಕಾಲದಿಂದಲೂ ಪ್ರಮುಖ ಧರ್ಮಗಳಲ್ಲಿ ಮಹಿಳೆ ಪುರುಷನಿಗೆ ಅಧೀನವಾಗಿರುವುದನ್ನೇ ಆದರ್ಶ ಎಂದು ಕರೆಯಲಾಗಿದೆ. ಹಾಗಾಗಿ ಜೀವನದ ಪ್ರತೀ ಹಂತದಲ್ಲಿ ಕೂಡ ಮಹಿಳೆ ಪುರುಷನ ಅಧೀನದಲ್ಲಿಯೇ ಇರಬೇಕು ಎಂಬುದು ಧಾರ್ಮಿಕ ಮೌಲ್ಯ, ಇದನ್ನು ಮಹಿಳೆಯಾದವಳು ಪಾಲಿಸಲೇಬೇಕು ಎಂಬಂತಹ ಮೌಲ್ಯಗಳನ್ನು ಬಿತ್ತುತ್ತಲೇ ಬರಲಾಗಿದೆ. ಒಂದುವೇಳೆ ಪುರುಷನಿಗೆ ಸಮಾನವಾಗಿ ನಡೆದುಕೊಂಡಳು ಎಂದರೆ ಮಹಿಳೆಗೆ ನಾನಾರೀತಿಯ ಕಷ್ಟಗಳು ಶುರುವಾಗುತ್ತವೆ. ಧರ್ಮ ಜನರ ಜೀವನದ ಪ್ರತೀ ಹಂತದಲ್ಲೂ ತನ್ನ ಆಲೋಚನಾ ನೆಲೆಗಳನ್ನು ವಿಸ್ತರಿಸಿಕೊಂಡಿದೆ. ಹಾಗಾಗಿ ಧರ್ಮದ ಕಬಂಧ ಬಾಹುಗಳಿಂದ ಬಿಡಿಸಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ. ಒಂದುವೇಳೆ ಬಿಡಿಸಿಕೊಂಡರೂ ತಮ್ಮ ಧರ್ಮದಿಂದಲೇ ಬಹಿಷ್ಕಾರಕ್ಕೆ ಒಳಗಾಗಬೇಕಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ತಾಹಿರಾ ಬೇಗಂಳದ್ದು.

ಪರಿಸ್ಥಿತಿ ಇಷ್ಟೊಂದು ಜಟಿಲವಾಗಿದ್ದರೂ ಮಾಡದ ತಪ್ಪಿಗೆ ಲಾಠಿಚಾರ್ಜ್ ಪ್ರಕರಣದಲ್ಲಿ ಕೋರ್ಟಿಗೆ ಅಲೆಯುತ್ತಿರುವಂತ ಕೂಲಿ ಕಾರ್ಮಿಕರ ಪಾಲಿಗೆ ದೂರದ ಪ್ರದೇಶಗಳಿಗೆ ಗುಳೆ ಹೋಗಿ ದುಡಿದು ಬದುಕುವಂತ ಹಕ್ಕು ಇಲ್ಲದಂತಾಗಿದೆ. ಏಕೆಂದರೆ ಒಂದು ಸಲ ಕೋರ್ಟಿಗೆ ಹಾಜರಿ ಆಗೋದು ತಪ್ಪಿದ್ದೆಯಾದರೆ ಪೊಲೀಸ್ ಇಲಾಖೆಯವರು ವಾರೆಂಟ್ ಆರ್ಡರ್ ನೀಡಿ ಕೂಲಿಕಾರರನ್ನು ಬಂಧಿಸುವಂತ ಘಟನೆಗಳು ಸಂಭವಿಸುತ್ತಲೇ ಇವೆ. ಹಾಗಾಗಿ ಈ ಕಡೆ ಕೋರ್ಟಿಗೆ ಹೋಗೋದು ತಪ್ಪಿಸುವ ಆಗಿಲ್ಲ. ಮತ್ತೊಂದು ಕಡೆ ಹರಿದು ತಿನ್ನುವ ಬಡತನವಿದ್ದರೂ ದೂರದ ಪ್ರದೇಶಗಳಿಗೆ ಹೋಗಿ ದುಡಿದು ಬದುಕುವ ಹಕ್ಕು ಇಲ್ಲದಂತಾಗಿದೆ. ಏಕೆಂದರೆ ಕೋರ್ಟಿಗೆ ಗೈರು ಹಾಜರಿಯಾದರೆ ಬಂಧಿಸುತ್ತಾರೆ ಎನ್ನುವಂತ ಭಯ ಮತ್ತೊಂದು ಕಡೆಯಾಗಿದೆ. ಇದೆಲ್ಲವನ್ನು ಮೀರಿ ಬೇಸಿಗೆ ಟೈಮ್‌ನಲ್ಲಿ ದುಡಿಯಲು ಪಂಚಾಯ್ತಿ ಕಡೆಯಿಂದ ಕೂಲಿ ಕೆಲಸವನ್ನು ಕೇಳೋಣವೆಂದರೆ ಮತ್ತೆಲ್ಲಿ ಇನ್ನೊಂದು ಪ್ರಕರಣವನ್ನು ಕೂಲಿಕಾರರ ಮೇಲೆ ದಾಖಲಿಸುತ್ತಾರೋ ಎನ್ನುವಂತಹ ಆತಂಕ ಈ ಭಾಗದ ಪ್ರತಿಯೊಬ್ಬ ಕೂಲಿಕಾರರಲ್ಲಿ ಮನೆಮಾಡಿಬಿಟ್ಟಿದೆ.

ರೈತ ಸಂಘಟನೆ ಯಾವಾಗಲೂ ಆಡಳಿತ ನಡೆಸುವ ಸರಕಾರದೊಂದಿಗೆ ಮುಖಾಮುಖಿಯಾಗುತ್ತಿರುತ್ತದೆ. ಆ ನಿಟ್ಟಿನಲ್ಲಿಯೇ ತನ್ನ ರಾಜಕೀಯ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳುತ್ತಿರುತ್ತದೆ. ಕೊಪ್ಪಳದ ಈ ಲಾಠಿಚಾರ್ಜ್ ಪ್ರಕರಣ ಜಮೀನ್ದಾರಿ ಪದ್ದತಿಯ ಸ್ಥಿರೀಕರಣಕ್ಕೆ

ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಈ ಕೇಸಿನಲ್ಲಿ ಸಿಲುಕಿಕೊಂಡವರು ಬಹಳಷ್ಟು ಜನರು ಬಡ ಕೂಲಿ ಕಾರ್ಮಿಕರೆ ಆಗಿದ್ದಾರೆ. ಇವರ ಮೇಲೆ ಎಫ್.ಐ.ಆರ್. ದಾಖಲಾಗಿರುವುದರಿಂದ ಇವರಾರೂ ಬೇರೆ ಊರುಗಳಿಗೆ ಹೋಗಿ ಕೆಲಸ ಮಾಡಲಾಗುತ್ತಿಲ್ಲ ಮತ್ತು ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸವನ್ನೂ ಸಹ ಕೇಳಲು ಆಗುತ್ತಿಲ್ಲ. ಹಾಗೆಯೇ ಸುಮ್ಮನೆ ಕುಳಿತುಕೊಂಡರೆ ಜೀವನ ನಡೆಸುವುದು ಕಷ್ಟವಾಗುತ್ತದೆ. ಆ ಕಾರಣಕ್ಕಾಗಿ ಅವರು ಸ್ಥಳೀಯ ಜಮೀನುದಾರರ ಹೊಲಗಳನ್ನೇ ಆಶ್ರಯಿಸಬೇಕಾದ ಸ್ಥಿತಿಗೆ ಬಂದಿದ್ದಾರೆ. ಇದರಿಂದ ಜಮೀನುದಾರರು ನಿಗದಿಪಡಿಸಿದ ಕೂಲಿಗೆ ಕೆಲಸ ಮಾಡಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಿದ್ದಾರೆ. ಹಾಗೆಯೇ ಈ ಸ್ಥಿತಿ ಕೂಲಿಯಲ್ಲಿನ ತಾರತಮ್ಯಕ್ಕೂ ಎಡೆ ಮಾಡಿಕೊಟ್ಟಿದೆ. ಹೀಗಾಗಿ ಸರಕಾರದ ವರದಿಯು ಸ್ಥಳೀಯ ಜಮೀನ್ದಾರರ ಪಾಲಿಗೆ ವರದಾನವಾಗಿದೆ. ಹಾಗಾಗಿ ಮಹಿಳೆಯರು ಎರಡೂ ಕಡೆ ಹಿಂಸೆಗೆ ಒಳಗಾಗಿರುವುದನ್ನು ಗಮನಿಸಬಹುದು. ಅಂದರೆ ವೇತನ ತಾರತಮ್ಯದ ಕಾರಣಕ್ಕಾಗಿ ಜಮೀನ್ದಾರರಿಂದ ಮತ್ತು ಕುಟುಂಬದಲ್ಲಿನ ಪಿತೃ ಪ್ರಧಾನ ಮೌಲ್ಯಗಳಿಂದ ಮಹಿಳೆಯರು ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾರೆ. ಒಟ್ಟಾರೆಯಾಗಿ ಇಡೀ ಪ್ರಕರಣದಲ್ಲಿ ಮಹಿಳೆಯರ ಧ್ವನಿ ಮೇಲೇಳದಂತೆ ಮಾಡಲಾಗಿದೆ ಮತ್ತು ಆ ಮೂಲಕ ಹಿಂಸೆಯ ಪ್ರಮಾಣವನ್ನು ಅಧಿಕಗೊಳಿಸಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಕೊಪ್ಪಳದಲ್ಲಿ ನಡೆದ ಲಾಠಿಚಾರ್ಜ್ ಪ್ರಕರಣದ ನಂತರ ಕೂಲಿ ಕಾರ್ಮಿಕ ಮಹಿಳೆಯರು, ಪುರುಷರು, ವಯೋವೃದ್ಧರು ಹೀಗೆ ಹಲವು ಜನರು ಹಲವಾರು ಕಷ್ಟಗಳನ್ನು ಅನುಭವಿಸಿರುವುದು ಕಂಡುಬರುತ್ತದೆ.

**ಉಪಸಂಹಾರ**

ಸರಕಾರ ಹಲವಾರು ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಲೇ ಬಂದಿದೆ. ಆದರೆ ಇವುಗಳು ಅನುಷ್ಠಾನದಲ್ಲಿ ಹಲವಾರು ತೊಂದರೆಗಳನ್ನು ಎದುರಿಸುತ್ತಿವೆ. ಉದ್ಯೋಗ ಖಾತರಿ ಯೋಜನೆಯ ಸ್ಥಿತಿಯೂ ಸಹ ಹಾಗೆಯೇ ಆಗಿದೆ. ಇಂದು ಈ ಯೋಜನೆಯನ್ನು ತಮ್ಮ ಅಭಿವೃದ್ಧಿಗೆಂದು ಬಂದಂತಹ ಯೋಜನೆ ಎಂದು ಈ ಭಾಗದ ಜನರು ಯಾರೂ ಹೇಳದೇ ಇರುವಂತಹ ಸ್ಥಿತಿ ಬಂದೊದಗಿದೆ. ಪರಿಸ್ಥಿತಿ ಹೀಗಿರುವಾಗ ಯೋಜನೆಯು ಸಾಫಲ್ಯಗೊಳ್ಳುವುದು ಹೇಗೆ? ಗ್ರಾಮೀಣ ಬಡ ಜನರ ಬದುಕು ಹಸನಾಗುವುದು ಯಾವಾಗ? ಎಂಬ ಪ್ರಶ್ನೆಗಳು ಕಾಡುತ್ತಲೇ ಇರುತ್ತವೆ. ಉದ್ಯೋಗ ಖಾತರಿ ಯೋಜನೆಯು ಸಾಮಾನ್ಯ ಜನರಿಗೂ ಹಕ್ಕಿನ ಪರಿಭಾಷೆಯನ್ನು ಕಲ್ಪಿಸಿಕೊಟ್ಟಿದೆ. ಹಾಗಾಗಿ ಪ್ರತಿಯೊಂದು ಗ್ರಾಮ ಪಂಚಾಯತಿಗಳಲ್ಲಿನ ಜನರು ಈ ಯೋಜನೆಯಡಿ ತಮ್ಮ ಹಕ್ಕಿನ ಮೂಲಕ ಪ್ರತಿಫಲವನ್ನು ಪಡೆಯುವ ಅವಕಾಶವನ್ನು ಹೊಂದಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಮೀನಾಕ್ಷಿ ಬಾಳಿ ಮತ್ತು ನೀಲ ಕೆ. (ಸಂ.) (2010). ನೆಲದ ನಂಟು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ಸಮಿತಿ.
- ವೆಂಕೋಬರಾವ್. (2000). ನ್ಯಾಯಕ್ಕಾಗಿ ಮಹಿಳೆಯರ ಹೋರಾಟ. ದಿವ್ಯಚಂದ್ರ ಪ್ರಕಾಶನ, ಬೆಂಗಳೂರು.

- ಶೈಲಜ ಎಮ್.ಸಿ. ಮತ್ತು ಇತರರು. (2006). ದುಡಿಯುವ ಕೈಗಳಿಗೆ ಉದ್ಯೋಗ. ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು.
- ಶ್ರೀಮತಿ ಎಚ್.ಎಸ್. (2004). ಹೆಣ್ಣು ಹೆಂಗಸು. ಬ್ಯಾಲದಕೆರೆ ಪ್ರಕಾಶನ, ಮಂಡ್ಯ.

**ದಿನಪತ್ರಿಕೆಗಳ ವರದಿಗಳು**

- ಕೂಲಿ ಕಾರ್ಮಿಕರಿಂದ ತಾಲ್ಲೂಕು ಪಂಚಾಯಿತಿಗೆ ಮುತ್ತಿಗೆ. (ಮಾರ್ಚ್ 22, 2011). ಕನ್ನಡ ಪ್ರಭ ದಿನಪತ್ರಿಕೆ, ಬೆಂಗಳೂರು.
- ಖಾತ್ರಿ ಕೂಲಿಗೆ ಆಗ್ರಹಿಸಿ ಧರಣಿ. (ಮಾರ್ಚ್ 18, 2011). ಕನ್ನಡ ಪ್ರಭ ದಿನಪತ್ರಿಕೆ, ಬೆಂಗಳೂರು.
- ಪೋಲಿಸ್ ಲಾಠಿಗೆ ರೈತರ ಬಾರುಕೋಲು. (ಏಪ್ರಿಲ್ 12, 2011). ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಬೆಂಗಳೂರು.
- ಹೆಣವಾದವರ ಹೆಸರಲ್ಲಿ ಹಣಗಳಿಸುವ ಭೂಪರು . (ಏಪ್ರಿಲ್ 11, 2011). ಸಂಯುಕ್ತ ಕರ್ನಾಟಕ, ಬೆಂಗಳೂರು.


IIMRD JOURNALS